# ತourಮನೆ

ಮುಂಜಾನೆ ಆರೂವರೆಯಾಗಿರಬೇಕು ಫೋನು ಕಿರುಚಿತು, ಮಸ್ತ ಮುಸುಕು ಹಾಕಿಕೊಂಡು ಮೈಮರೆತು ನಿದ್ದೆಯಲ್ಲಿದ್ದವನು ತಡಬಡಿಸಿ ಎದ್ದೆ, ಇವಳದೇ ಫೋನು, ಅದೇನು ಮನೇಲಿ ಇಲ್ಲ ಅಂದುಕೊಂಡಿರಾ, ತವರುಮನೆಗೆ ಹೋಗಿಬರ್ತೀನಿ ಅಂತ ಹೋಗಿದ್ಲು ಇವತ್ತು ಬರ್ತಾ ಇದಾಳೆ... ಆಕಡೆಯಿಂದ ದನಿ ಬಂತು, ಹಲೊ ಗಿಲೋ ಏನಿಲ್ಲ "ಎದ್ದೇಳು ಮಂಜುನಾಥಾ... ಸತಿ ಬಂದು ಕಾಯುತಿರುಹಳು ನಿನ್ನ ದರುಶನಕೆ ಎದ್ದೇಳು..." ಹಾಡು ಇನ್ನೂ ಸಾಗಿರೊದು, "ರೀ ಮಂಜುನಾಥ ಅಂತ ಯಾರೂ ಇಲ್ಲ ಇಲ್ಲಿ ರಾಂಗ ನಂಬರು ಇದು" ಅಂದೆ, "ನಾವೂ ಕರೆಕ್ಟ ನಂಬರು ಬೇಕು ಅಂತ ಫೋನು ಮಾಡಿಲ್ಲ, ನಮ್ಗೂ ರಾಂಗ ನಂಬರೇ ಬೇಕಿತ್ತು, ಅಲ್ಲ ಇಷ್ಟ ಮಧುರವಾದ ದನಿಯ ಒಬ್ಳು ಹುಡುಗಿ ಫೋನು ಮಾಡಿದ್ರೆ ರಾಂಗ ನಂಬರಾದ್ರೂ ಮಾತಾಡಬೇಕ್ರಿ" ಅಂದ್ಲು, "ಒಹೊ ಅದೆಲ್ಲಾ ನಾವು ಎಕ್ಸಪರ್ಟು, ನೀನು ಅಂತ ಗೊತ್ತಾಗಿದ್ದಕ್ಕೆ ರಾಂಗ ನಂಬರು ಅಂದಿದ್ದು, ಇಲ್ಲಾಂದ್ರೆ ನಾವೇ ರೈಟು ಆಗಿರ್ತಿದ್ವಿ" ಅಂದೆ "ನಿಮ್ಮ ಬುದ್ಧಿ ನಂಗೊತ್ತಿಲ್ವಾ, ಬನ್ರಿ ಬೇಗ ಈಗ ಬೆಂಗಳೂರ ಹತ್ರ ಬಂದಾಯ್ತು, ಇನ್ನೇನು ನವರಂಗ(ಬೆಂಗಳೂರಿನಲ್ಲಿ ಒಂದು ಏರಿಯಾ) ಬಸ್ ಸ್ಟಾಪಗೆ ಬಂದು ಕಾಯ್ತೀನಿ" ಅಂದ್ಲು. "ಆಯ್ತು ಬಂದೆ ಮೇಡಮ್" ಅಂತಂದು ನಾನೇನು ಕಮ್ಮಿ ಅಂತ ನಮ್ಮ ಸಾಹಿತ್ಯದಲ್ಲಿ ನಾನೊಂದು ಹಾಡು ಗುನುಗುನಿಸಿದೆ "ಭಾಗ್ಯದಾ ಲಕ್ಷ್ಮೀ ಬಾರಮ್ಮ, ಗಂಡನಮನೆಗೆ... ಶನಿವಾರದ ಬ್ರೆಕ್‌ಫಾಸ್ಟ ವೇಳೆಗೆ.."

ಅತ್ತಿತ್ತ ನೋಡುತ್ತ ಸೆರಗಿನ ತುದಿಯನ್ನು ಸುತ್ತಿ ಸುರುಳಿ ಮಾಡುತ್ತಾ ನಿಂತಿದ್ಲು, ನಾ ಕಾಣುತ್ತಿದ್ದಂತೆಯೆ ಕ್ಲೊಜಅಪ್ ಸ್ಮೈಲ್ ಕೊಟ್ಲು, ನಾನೂ ಪ್ರತಿಯಾಗಿ ಹಲ್ಲು ಕಿರಿದೆ, ಪಕ್ಕದಲ್ಲಿ ನೋಡಿದ್ರೆ ಒಂದೇ ಬ್ಯಾಗು, ಅಬ್ಬಾ ಈ ಸಾರಿ ಭಾರೀ ಲಗೇಜು ಇಲ್ಲ ನಾ ಅದನ್ನೆಲ್ಲ ಹೊತ್ತು ಕತ್ತೆಯಾಗಲ್ಲ ಬಚಾವು ಅಂತಿದ್ದರೆ, "ಈ ಬ್ಯಾಗು ತುಗೊಳ್ಳಿ, ಉಳಿದವು ಅಲ್ಲಿ ಟ್ರಾವೆಲ್ ಏಜನ್ಸಿನಲ್ಲಿವೆ" ಅಂದ್ಲು ಪಿಳಿಪಿಳಿ ಕಣ್ಣು ಬಿಡ್ತಾ ಅವಳ ಮುಖ ನೋಡಿದ್ದಕ್ಕೆ, "ಎಲ್ಲ ಅಮ್ಮ ಹಾಕಿದ್ದು ನಾನಾದ್ರೂ ಏನ್ ಮಾಡ್ಲಿ" ಅಂತ ಅಸಹಾಯಕತೆ ಪ್ರದರ್ಶಿಸಿದಳು... ಎಲ್ಲ ಅಮ್ಮ ಹಾಕಿದ್ದು ಅಂತ ಹೇಳೋಕೆ ಮಾತ್ರ, ಅವರು ಹಾಕೊದಲ್ದೇ, ಇವಳೂ ಆ ಉಪ್ಪಿನಕಾಯಿ ಚೆನ್ನಾಗಿದೆ, ಹಪ್ಪಳ ನೀನೇ ಮಾಡಿದ್ದಾ ಅಂತೆಲ್ಲ ಕೇಳಿ ಹೇಳಿ, ಅದೆಲ್ಲ ಕಟ್ಟಿಸಿಕೊಂಡು ಬಂದಿರ್ತಾಳೆ. ಗತ್ಯಂತರವಿಲ್ಲದೇ, ಎಲ್ಲ ಎತ್ತಿ ಆಟೊಗೆ ಹಾಕಿಕೊಂಡು ಮನೆಗೆ ಬಂದಿದ್ದಾಯ್ತು. ಆಟೊನವನೂ ಹತ್ತು ಜಾಸ್ತಿ ಕೇಳಿದ, ಅದೂ ಸರಿಯೇ ಅಂತ ತೆತ್ತು ಬಂದೆ.

ಲಗೇಜು ಇಳಿಸಿಕೊಳ್ಳಬೇಕಾದ್ರೆ, ಪಕ್ಕದ ಮನೆ ಪದ್ದು ಬಂದು "ಈಗ್ ಬಂದ್ರಾ, ಬಹಳ ದಿನ ಹೋಗಿದ್ರಿ" ಅಂದ್ಲು, ನಾನು ಕೈಯಲ್ಲಿ ಇನ್ನೆರಡು ಬ್ಯಾಗು ತೆಗೆದುಕೊಂಡು ವಿಧೇಯ ಪತಿಯಂತೆ ಅವಳ ಮುಂದೆ ಪೋಸು ಕೊಟ್ಟೆ, ಇವಳು "ಹಾಂ ತವರುಮನೆಗೆ ಹೋಗಿದ್ದೆ, ಎಲ್ಲಿ ನಾಲ್ಕೇ ದಿನ ಆಯ್ತು ಹೋಗಿ" ಅಂದ್ಲು ನಾನು ನಡುವೆ ಬಾಯಿ ಹಾಕಿ "ಇನ್ನೆರಡು ದಿನಾ ಇದ್ದು ಬಾ ಅಂದ್ರೂ ಬೇಗ ಬಂದೀದಾಳೆ" ಅಂತಂದೆ, ಪದ್ದು "ನಿಮ್ಮನ್ನು ಬಿಟ್ಟು ಇರೋಕೆ ಆಗಲ್ಲ ಅನ್ಸತ್ತೆ" ಅಂತ ಛಿಡಾಯಿಸಿದಳು, ನನ್ನಾಕೆ ಕಣ್ಣು ಕೆಕ್ಕರಿಸಿ ನನ್ನ ನೋಡಿದ್ಲು, ಬ್ಯಾಗು ಇಡಲು ಮನೆಯೊಳಗೆ ನುಗ್ಗಿದೆ, ಕೆಕ್ಕರಿಸಿ ನೋಡದೇ ಇನ್ನೇನು, ಹೋಗಿ ಎರಡು ದಿನ ಆಗಿಲ್ಲ, ಆಗಲೇ ನಾಲ್ಕು ಸಾರಿ ಫೋನು ಮಾಡಿ ಕೇಳಿದ್ದೆ ಯಾವಾಗ ಬರ್ತೀಯಾ ಅಂತ. ಈಗ ಹೀಗಂದ್ರೆ ಸಿಟ್ಟಾಗದೇ ಇರ್ತಾಳಾ, **ನಾಲ್ಕೇ ದಿನ ಅಂತಾಳೆ ಸರಿಯಾಗಿ ಹದಿನೈದು ದಿನಾ ಆಗಿರಬೇಕು ಅವಳು ಹೋಗಿ ಆದ್ರೂ ಅದು ಕಮ್ಮಿಯೇ ಅವಳಿಗೆ.** ಪದ್ದು ಇನ್ನೂ ಹೇಳ್ತಾ ಇದ್ಲು "ನಾವೆಲ್ಲ ಇಲ್ವಾ ಇಲ್ಲಿ ಈ ಕಡೆ ಯಾಕೆ ಚಿಂತೆ ನಿಮಗೆ" ಅಂತೇನೇನೋ... ಅವಳು ಇದ್ದದ್ದೇ ಚಿಂತೆ ನನ್ನವಳಿಗೆ ಅಲ್ವಾ.

ಇನ್ನೂ ಸಿಟ್ಟು ಇಳಿದಿರಲಿಲ್ಲ, ಒಳಗೆ ಬಂದವಳೆ, "ಎಲ್ಲ ಮನೆ ಹರವಿ ಇಟ್ಟೀದೀರಾ ಎರಡು ದಿನ ಇರದಿದ್ರೆ ಮನೇನಾ ಯಾವ ರೀತಿ ಮಾಡಿಡ್ತೀರಾ, ಎರಡು ದಿನಾ ತವರುಮನೇಲಿ ಹಾಯಾಗಿ ಇದ್ದು ಬರೋಣ ಅಂದ್ರೂ ಬಿಡಲ್ಲ" ಅಂತ ಬಯ್ದ್ಳು, ನಾನು ಈಗ್ ಮಾತಾಡುವುದು ಸರಿಯಲ್ಲ ಅನಿಸಿತು ಸುಮ್ಮನಾದೆ. ಅಡುಗೆಮನೆಗೆ ಟೀ ಮಾಡ ಹೋದವಳು ನನ್ನ ಟೂತಬ್ರಷನೊಂದಿಗೆ ಹೊರಬಂದ್ಲು "ಇದು ಬಾತರೂಮಿನಲ್ಲಿಇರಬೇಕಾದ್ದು ಅಡುಗೆ ಮನೇಲಿ ಏನ್ ಮಾಡ್ತಾ ಇತ್ತು" ಅಂತ ಮತ್ತೆ ಶುರುವಾಯ್ತು... "ಇಲ್ಲ ಮುಂಜಾನೆ ಬ್ರಷ್ ಮಾಡ್ತಾ ಟೀ ಮಾಡಿ ಅಲ್ಲೇ ಇಟ್ಟೆ" ಅಂತ ತಲೆ ತುರಿಸಿಕೊಂಡೆ. ಬೆಡರೂಮ ಹೊಕ್ಕವಳಿಗೆ ರಾಶಿ ರಾಶಿಯಾಗಿ ಬಟ್ಟೆಗಳು ಬಿದ್ದಿರುವುದು ಕಾಣಿಸಿತು, ಅವಳು ಕೇಳುವ ಮುಂಚೆಯೇ "ಬೆಳಗ್ಗೆ ಕರವಸ್ತ್ರ ಸಿಗಲಿಲ್ಲ ಅಂತ ಹುಡುಕ್ತಾ.... ಇದ್ದೆ" ಅಂದೆ ನಿಧಾನವಾಗಿ, ಅವಳು ಒಂದೊಂದೇ ಮಡಚಿ ಕೊಟ್ರೆ ಎತ್ತಿ ಬೀರುವಿನಲ್ಲಿಟ್ಟೆ. ಹಾಸಿಗೆ ಹತ್ರ ಹರಡಿಕೊಂಡು ಬಿದ್ದಿರುವ ನಾಲ್ಕು ದಿನದ ದಿನಪತ್ರಿಕೆಗಳು, ಸೊಫಾ ಮೇಲೆ ಒಣಗಿ ಹಾಕಿರುವ ವಸ್ತ್ರಗಳು, ಹಾಲ್‌ಗೆ ಬಂದಿರುವ ಬೂಟುಗಳು ಒಂದೇ ಎರಡೆ ಎಲ್ಲದಕ್ಕೂ ಹರಿಹಾಯ್ದಳು.

ತವರುಮನೆಯಿಂದ ತಂದ ಅದ್ಯಾವುದೊ ಸುವಾಸನೆ ಅಕ್ಕಿ ಅನ್ನ, ಅವರಮ್ಮನ ಕೈ ಹಪ್ಪಳ ಎಲ್ಲ ಚಪ್ಪರಿಸಿದ್ದಾಯ್ತು, ಅದೇನೊ ದೊಡ್ಡ ಖುಷಿ ಅವಳಿಗೆ, ಸಾರು ಚೆನ್ನಾಗಿದೆ ಅಂದ್ರೆ ಅಮ್ಮ ಕೊಟ್ಟ ಸಾಂಬಾರು ಪುಡಿಯ ಗುಣಗಾನ, ಅಮ್ಮ ಇದು ಮಾಡಿಕೊಟ್ಲು, ಅಮ್ಮ ಅದ ಚೆನ್ನಾಗಿ ಮಾಡ್ತಾಳೆ ಇನ್ನೂ ಏನೇನೊ ಹೇಳ್ತಾನೇ ಇದ್ಲು... ಅಪ್ಪ ಕೊಡಿಸಿದ ಸೀರೆ, ಅಮ್ಮ ಅದಕ್ಕೆ ಗೊಂಡೆ ಕಟ್ಟಿದ್ದು, ಅಣ್ಣ ಕೊಡ್ಸಿದ ಹೊಸ ಸೆಂಟು ಬಾಟಲಿ, ನೇಲಪಾಲಿಶ, ಎಲ್ಲ ನೋಡಿದ್ದಾಯ್ತು. ಚಿಕ್ಕ ಮಗೂ ತನ್ನ ಪೀಪಿ ಬಲೂನು ತೋರಿಸಿ ಸಂಭ್ರಮಿಸಿದಂತಿತ್ತು. ನಾನು ಅದಕ್ಕಿಂತ ಹೆಚ್ಚಿನದನ್ನು ಕೊಡಿಸಿದ್ದರೂ ಅವಳಿಗೆ ಅದರಷ್ಟು ಆನಂದ ಸಿಗುತ್ತಿರಲಿಲ್ಲ ಬಹುಶ:.

ಈ ಹೆಣ್ಣು ಮಕ್ಕಳಿಗೆ ತವರು ಮನೆಯಂದ್ರೆ ಹಾಗೇನೆ ಏನೊ ಒಂದು ಅಕ್ಕರೆ, **ತನ್ನ ಮನೆಯವರನ್ನೆಲ್ಲ ಬಿಟ್ಟು ಹೊಸ ಪರಿವಾರದಲ್ಲಿ ಸೇರಿಕೊಂಡರೂ ಬಿಡದಿರುವ ಹಳೆಯ ನಂಟು ಅದು**, ಅತ್ತೆ ಮಾವ ಎಷ್ಟೇ ಪ್ರೀತಿ ಮಾಡಿದರೂ ಅಪ್ಪ ಅಮ್ಮ ನೆನಪಿಗೆ ಬಂದೇ ಬರುತ್ತಾರೆ, ಇನ್ನು ಕಾಡುವ ಅತ್ತೆ ಮಾವ ಇದ್ದರಂತೂ ಮುಗಿದು ಹೋಯ್ತು ಅನುದಿನ ನೆನಪಾಗದಿದ್ರೆ ಕೇಳಿ. ಕೆಲವು ಕಡೆಯಂತೂ ಮನೆ ಅಳಿಯನನ್ನಾಗಿಸಿಕೊಂಡು ತವರುಮನೆಯಲ್ಲೇ ಉಳಿದಿರುವವರೂ ಏನು ಕಮ್ಮಿಯಿಲ್ಲ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಅಂತಂದರೂ ಅದರಿಂದ ಹೊರಗೆ ಬರುವುದು ಸಲೀಸಲ್ಲ. ಆದರೂ ಮದುವೆಯಾದ ಮೇಲೆ ಹೆಣ್ಣು ಮಕ್ಕಳಿಗೆ ಮನೆ ಬಿಟ್ಟು ಬರುವುದು ಅನಿವಾರ್ಯ, ಅದನ್ನರಿತುಕೊಂಡರೆ ಆ ಮಟ್ಟಿಗೆ ದೂರ ಇರುವ ನೋವು ಕಮ್ಮಿಯಾದೀತು.

ಊಟವಂತೂ ಆಯ್ತು ಅಂತ ಹಾಗೆ ಏನೊ ಯೋಚಿಸುತ್ತ ಸೊಫಾದಲ್ಲಿ ಬಿದ್ದುಕೊಂಡಿದ್ದೆ, ತಲೆ ತನ್ನ ತೊಡೆಮೇಲಿರಿಸಿಕೊಂಡು ಜಾಗ ಮಾಡಿಕೊಂಡು ಬಂದು ಕುಳಿತಳು, ಕೈ ಬೆರಳಲ್ಲೇ ಬಾಚಣಿಕೆಯಂತೆ ಬಾಚುತ್ತ "ಮುಂಜಾನೆ ಬಹಳ ರೇಗಿದೆ" ಅಂದ್ಲು "ಏನ್ ಮಾಡೀಯಾ ಬಿಡು ಎಲ್ಲ ಹರವಿ ದನದ ಕೊಟ್ಟಿಗೆ ಮಾಡಿಟ್ಟಿದ್ದೆ, ಬಯ್ಯದೆ ಏನು.." ಅಂದೆ, "ಇನ್ನೂ ನಾಲ್ಕು ದಿನಾ ನಾ ಅಲ್ಲೇ ಇದ್ದಿದ್ರೆ ಅಷ್ಟೇ" ಅಂದ್ಲು "ಅದಕ್ಕೇ ನಾನು ಬಾ ಬಾ ಅಂತ ಕರೆದದ್ದು" ಅಂದೆ ಮತ್ತದೇ ಗೋಳು "ಎರಡು ದಿನ ಹಾಯಾಗಿ ತವರುಮನೇಲಿ ಇರೋಣ ಅಂದ್ರೂ ಆಗಲ್ಲ" ಅಂತ ರಾಗ ತೆಗೆದಳು "ಎಷ್ಟು ದಿನ ಇರ್ತಿದ್ದೆ, ಇನ್ನೆರಡು ದಿನ, ನಾಲ್ಕು, ಇಲ್ಲ ವಾರ, ತಿಂಗಳು ಮತ್ತೆ ಬರಲೇಬೇಕಿತ್ತಲ್ಲ", ಅದಕ್ಕವಳು "ಅದೂ ಸರಿ ಆದ್ರೆ ಏನೊ ಸೆಳೆತ ಬಿಟ್ಟು ಬರಲೇ ಆಗಲ್ಲ" ಅಂದ್ಲು. "ನಾನೂ ಇಲ್ಲಿ ಒಬ್ಬನೇ, ನನ್ನ ಅಪ್ಪ ಅಮ್ಮನೂ ನನ್ನ ಜತೆ ಇಲ್ಲ, ಹಾಗಂತ ನಾನೂ ಅಲ್ಲೇ ಹೋಗಿ ಇದ್ರೆ, ಕೆಲಸ ಮಾಡೋರು ಯಾರು ಇಲ್ಲಿ, ಬೆಂಗಳೂರು ನನ್ನ ನೆಚ್ಚಿನ ಊರು, ಏನೆಲ್ಲ ಕೊಟ್ಟಿದೆ ಈ ಊರು ನನಗೆ, ಆದ್ರೆ ತವರೂರು ನೆನಪಿಗೆ ಬಾರದಿರುತ್ತ ಇಲ್ಲ, ಬೆಂಗಳೂರು ಬಿಟ್ಟು ಹೋಗಲು ಆಗುತ್ತ, ಆಗಬಹುದು ಕೆಲಸ ಎಲ್ಲ ಬಿಟ್ಟು ಹೋಗುತ್ತೀನಿ ಅಂದ್ರೆ ಆದ್ರೆ... ಕೆಲವು ಸಂಗತಿಗಳು ಬದುಕಿನಲ್ಲಿ ಅನಿವಾರ್ಯ, ಅನುಸರಿಸಿಕೊಳ್ಳಬೇಕು ಆಗಲೇ ಬದುಕು. ಬೆಂಗಳೂರು ನಾ ನೆಚ್ಚಿ ಬಂದಿದ್ದು, ಈಗ ಖುಷಿಯಾಗಿಯೇ ಇಲ್ಲಿದ್ದೇನೆ, ನೆನಪಾದಾಗ ಎರಡು ದಿನ ಊರಿಗೆ ಹೋಗಿ ಬರುತ್ತೀನಿ, ಹಾಗೇ ನನ್ನ ನೆಚ್ಚಿ ಮದುವೆಯಾದ ನೀನು ನನ್ನೊಂದಿಗಿರದೇ ಅಲ್ಲಿದ್ದರೆ" ಅಂದೆ "ಹೂಂ ಹದಿನೈದು ದಿನಾ ಆಯ್ತು, ಅದೇ ಹೊಗ್ತೀನಿ ಅಂದ್ರೂ ಅಮ್ಮ ಬಿಡ್ಲಿಲ್ಲ, ಎಷ್ಟು ದಿನಾ ಆದಮೇಲೆ ಬಂದೀದೀಯಾ ಇರು ಅಂತ, ಅಣ್ಣ ಇನ್ನೆರಡು ದಿನಾ ಅಂತ ಹಾಗೆ ಮದುವೆಯೊಂದು ಇದೆ ಅದನ್ನು ಮುಗಿಸಿ ಹೋಗು ಅಂತ ಅಪ್ಪ ಹೀಗೆ ತಡವಾಯ್ತು" ಅಂದ್ಲು "ಒಬ್ನೇ ಬೇಜಾರಾಯ್ತು, ಅಮ್ಮ ಇಲ್ಲಿದ್ದಿದ್ರೆ ನಿಂಗೆಷ್ಟು ದಿನಾ ಬೇಕೊ ಇರು ಅಂತಿದ್ದೆ" ಅಂದೆ "ತವರುಮನೆ ನಾಲ್ಕು ದಿನಾ ಚೆನ್ನ, ಆಮೇಲೆ ಎಲ್ಲ ಏನಿಲ್ಲ" ಅವಳೇ ಅಂದ್ಲು ನಾ ಹೇಳಿದ್ದು ಅವಳಿಗೆ ತಿಳಿದಂತಿತ್ತು.

ತವರುಮನೇಲಿ ತಿಂದು ತಿಂದು ಉಬ್ಬೀದೀಯಾ ನೀನು ಅಂತ ಗಲ್ಲ ಕಿವಿಚಿದೆ, ಚೀರಿದ್ಲು, "ನೀವೊ ಹೊರಗೆ ತಿಂಡಿ ತಿಂದು ಸೊರಗಿ ಸಣಕಲಾಗಿದೀರಾ" ಅಂದ್ಲು "ಇನ್ನೆರಡು ದಿನಾ ಆಗಿದ್ರೆ ಬೇರೆ ಹೆಂಡ್ತಿ ನೊಡ್ಕೊಂಡು ಬಿಡ್ತಿದ್ದೆ" ಅಂದೆ, "ಹಾಗೇನಾದ್ರೂ ಮಾಡಿದ್ರೆ ನಮ್ಮಪ್ಪನಿಗೆ ಹೇಳಿ ಕೇಸು ಹಾಕಿಸ್ತಿದ್ದೆ ನಾನೂ" ಅಂದ್ಲು ಇನ್ನೂ ಸ್ವಲ್ಪ ತವರುಮನೆ ಗುಂಗಿನಿಂದ ಹೊರಬಂದಿರಲಿಲ್ಲ ಅಂತ ಕಾಣ್ತದೆ... "ಅಮ್ಮ ಫೋನು ಮಾಡಿದ್ಲು" ಅಂದೆ, "ಅಯ್ಯೊ, ಅತ್ತೆಗೆ ಮನೆಗೆ ಬರ್ತಿದ್ದಂಗೆ ಫೋನು ಮಾಡ್ತೀನಿ ಅಂದಿದ್ದೆ, ಒಳ್ಳೆದಾಯ್ತು ನೆನಪಿಸಿದ್ದು, ಮನೆಯೊಂದು ಮೂರು ಬಾಗಿಲು ಧಾರವಾಹಿ ಎಲ್ಲಿಗೆ ಬಂತು ಕೇಳ್ಬೇಕು" ಅಂತ ನನ್ನ ಮೊಬೈಲು ಕೈಗೆ ತೆಗೆದುಕೊಂಡಳು, ನಾ ತವರುಮನೆ "ತ" ಅವಳ ತಲೆಯಿಂದ ತೆಗೆದು ourಮನೆ ಬಾಗಿಲು ಹಾಕಿ ಭದ್ರ ಮಾಡಲು ಮೇಲೆದ್ದೆ...

ಕೊನೆಗೆ ಅದ್ಯಾವಗಲೋ ಬರೆದ ಕೆಲವು ಸಾಲುಗಳು...
ನಮಗೆಂದಿದ್ರೂ ourಮನೆ
ಅತಿ ಸುಂದರ ಅರಮನೆ.
ನೆಂಟರಲ್ಲಿ ಹೋದ್ರೆ ಅಂತಾರೆ oh!! urಮನೆ.
ಅದರೆ ಅದೆಂದಿದ್ರೂ ಅವರ ಮನೆ.
ಅವಳಿಗೆ ಪ್ರೀತಿ ತವರುಮನೆ.
ಅದೆಂದೂ ಅವ್ವಾರ ಮನೆ.
ಅವ್ವ ಇಲ್ಲದಿರೆ ಹೋದಾಗೊಂದು hourಮನೆ.
ಮರೆಯಲೇಬೇಕು ತಾಯಿ और ಮನೆ.
ಯಾಕೆಂದರಾಗ ಅದು ಅಣ್ಣಾರ ಮನೆ.
ಅದಕ್ಕೆ ಅದೆಂದೂ ಅನ್ಯರ ಮನೆ.

ಹೆಣ್ಣುಮಕ್ಕಳಿಗೆ ತವರೆಂದರೆ ಬಹಳ ಪ್ರೀತಿ ಮೊದಲಿನಿಂದಲೂ, ಅದು ಒಂದು ಲಿಮಿಟ್ಟಿನಲ್ಲಿ ಇದ್ದರೆ ಒಳ್ಳೆಯದು, ನಮ್ಮೂರ ಕಡೆ ಹಳ್ಳಿಗಳಲ್ಲಿ ಹೀಗೆ ತವರುಮನೆ ವ್ಯಾಮೋಹದಲ್ಲಿ ಬಂದು ಅಲ್ಲೇ ತಳವೂರುವ ಹೆಣ್ಣುಮಕ್ಕಳ ಉದ್ದೇಶಿಸಿ ಬರೆದದ್ದು ಇದು ಎಲ್ಲರಿಗೂ ಅನ್ವಯವಾಗಬೇಕೆಂದೇನಿಲ್ಲ.
ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...